# ಮಾತು-ಕತೆ

ಕೆ. ವಿ. ಸುಬ್ರಹ್ಮಣ್ಯಂ ಅವರು ಕನ್ನಡದ ಪ್ರಮುಖ ಕಲಾ ಲೇಖಕರಲ್ಲಿ ಒಬ್ಬರು. ಕಲಾ ವಿಮರ್ಶಕರಾಗಿ ಹಾಗೂ ಕಲಾ ಇತಿಹಾಸಕಾರರಾಗಿ ಗಣನೀಯ ಕೆಲಸ–ಬರವಣಿಗೆ ಮಾಡಿದ್ದಾರೆ. ಕನ್ನಡದ ಬಹುತೇಕ ಎಲ್ಲ ಪತ್ರಿಕೆಗಳಲ್ಲಿಯೂ ಅವರ ಬರಹಗಳು ಪ್ರಕಟವಾಗಿವೆ. ಮೂಲತಃ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ವಾಗಟ ಅಗ್ರಹಾರದವರಾದ ಸುಬ್ರಹ್ಮಣ್ಯಂ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕ ಪದವಿ (ಬಿ.ಎ.) ಪಡೆದವರು. ಪದವಿಗಾಗಿ ನಡೆಸಿದ ಓದಿನಲ್ಲಿ ಇತಿಹಾಸ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರಗಳ ಬಗ್ಗೆ ಕಲಿತಿದ್ದರು. ಎಂ.ಟಿ.ವಿ. ಆಚಾರ್ಯರ 'ಆಚಾರ್ಯ ಕಲಾಭವನ'ವು ಅವರಿಗೆ ಅನೌಪಚಾರಿಕ ಕಲಿಕೆಗೆ ಅನುವು ಮಾಡಿಕೊಟ್ಟಿತು. ಹಾಗೆಯೇ ದೇವನಹಳ್ಳಿಯ ಶಿಲ್ಪಿ ಎ.ಸಿ. ಹನುಮಂತಾಚಾರ್ಯ ಅವರ ಮಾರ್ಗದರ್ಶನವೂ ದೊರಕಿತು.

ಕಳೆದ ನಾಲ್ಕು ದಶಕಗಳಿಂದ ಕನ್ನಡದಲ್ಲಿ ದೃಶ್ಯಕಲೆಯ ಚಿತ್ರ, ಶಿಲ್ಪ, ಪ್ರಿಂಟ್, ಇನ್‌ಸ್ಟಾಲೇಷನ್, ಛಾಯಾಚಿತ್ರಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ದೃಶ್ಯಕಲೆಯ ವಿಮರ್ಶೆಯಲ್ಲಿ ಸೌಂದರ್ಯಶಾಸ್ತ್ರೀಯ ನೋಟಗಳನ್ನು ದಾಖಲಿಸುವುದು ಅವರ ವಿಶೇಷ. ಸ್ವತಃ ಕಲಾವಿದರೂ ಆಗಿರುವ ಸುಬ್ರಹ್ಮಣ್ಯಂ ಅವರು ಹಲವು ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ನವದೆಹಲಿ ರಾಷ್ಟ್ರೀಯ ಕಲಾಮೇಳ, ಚಿತ್ರಕಲಾ ಪರಿಷತ್ತಿನ ಅಖಿಲ ಭಾರತ ಚಿತ್ರಕಲಾ ಪ್ರದರ್ಶನ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರದರ್ಶನಗಳಲ್ಲಿ ಸುಬ್ರಹ್ಮಣ್ಯಂ ಅವರ ಕಲಾಕೃತಿಗಳು ಪ್ರದರ್ಶನ ಕಂಡಿವೆ.

'ಕೆ. ವೆಂಕಟಪ್ಪ ಸಮಕಾಲೀನ ಪುನರವಲೋಕನ', 'ಎಸ್.ಜಿ. ವಾಸುದೇವ್', 'ವಿಜಯ ಸಿಂಧೂರ', 'ಎನ್. ಹನುಮಯ್ಯ', 'ಆರ್.ಎಸ್. ನಾಯ್ಡು', 'ಪೊನ್ನಪ್ಪ ರಾಜಾರಾಮ್', 'ವೆಂಕಟಾಚಲಪತಿ' ಅವರು ಪ್ರಕಟಿಸಿದ ಕಲಾವಿದರ ಜೀವನ ಚರಿತ್ರೆಗಳು. 'ಕರ್ನಾಟಕದ ಆಧುನಿಕ ಶಿಲ್ಪಕಲೆ', 'ಕಲಾ ಸಂವೇದನೆಯ ಒಳನೋಟಗಳು', 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ', 'ಇನ್‌ಸ್ಟಾಲೇಷನ್ ಕಲಾ ಪ್ರಪಂಚ', 'ದೃಶ್ಯಧ್ಯಾನಗಳು'– ಸುಬ್ರಹ್ಮಣ್ಯಂ ಅವರ ಚಿತ್ರ–ಶಿಲ್ಪಕಲೆಯ ಕುರಿತ ಪುಸ್ತಕಗಳು. ಕೋಲಾರ ಜಿಲ್ಲೆಯ ಘಟ್ಟಮಾದಮಂಗಲ, ಟೇಕಲ್, ಆಂಧ್ರಪ್ರದೇಶದ ಕಂಗುಂದಿ, ರಾಯದುರ್ಗಗಳಲ್ಲಿನ ಬೃಹತ್ ಶಿಲಾಶ್ರಯದಲ್ಲಿನ ಆದಿಮ ಚಿತ್ರಗಳನ್ನು ಶೋಧಿಸಿ, ಆ ಕುರಿತ ಎರಡು ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿಯ ಗೌರವ ಪ್ರಶಸ್ತಿ (1999), ಹರಿಯಾಣದ ಸುಭದ್ರಕುಮಾರಿ ಚೌವಾಣ್ ಜನ್ಮಶತಮಾನೋತ್ಸವ ಸಮ್ಮಾನ್ (2004), ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಸುವರ್ಣ ಕರ್ನಾಟಕದ ವರ್ಷದ ಗೌರವ (2006), ಕರ್ನಾಟಕ ರಾಜ್ಯೋತ್ಸವ (2019) ಪ್ರಶಸ್ತಿಗಳು ಸಂದಿವೆ. ಅವರಿಗೆ ಚೆನ್ನೈನ **United Writers Association of India**ನ **Fellow** ಗೌರವ ಕೂಡ ಸಂದಿದೆ.

ಕೆ.ವಿ. ಸುಬ್ರಹ್ಮಣ್ಯಂ ಅವರೊಂದಿಗೆ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.

◆ ಬಿ.ಎ. ಪದವಿ ಪಡೆದ ನಿಮಗೆ ಕಲೆ ಹಾಗೂ ಬರವಣಿಗೆಯ ಬಗ್ಗೆ ಒಲವು ಮೂಡಿದ್ದು ಹೇಗೆ? ಈ ಯಾನ ಆರಂಭವಾದದ್ದು ಯಾವಾಗ?

ಹೊಟ್ಟೆಪಾಡಿಗಾಗಿ ಕೆಲಸ ಮಾಡುವುದಕ್ಕೆ ಡಿಗ್ರಿ ಓದಬೇಕಿತ್ತು. ಡಿಗ್ರಿ ಓದಿ ಕೆಲಸಕ್ಕೆ ಸೇರಿದ ಮೇಲೆ ನನ್ನ 'ದಾರಿ' ಕಂಡುಕೊಂಡೆ. ಅದು ಪದವಿ ಮುಗಿಸಿ ಕೆಲಸಕ್ಕೆ ಸೇರಿದ ನಂತರ ಕಂಡುಕೊಂಡ ದಾರಿಯಲ್ಲ. ಮೊದಲಿನಿಂದಲೂ ನನಗೆ ಕಲೆ–ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಹುಡುಕಾಟ–ಸುತ್ತಾಟ ನನಗೆ ಪ್ರಿಯವಾದ ಸಂಗತಿಗಳು. ಹಳ್ಳಿಯಿಂದ ಬಂದ ನನಗೆ ಕಾಡು–ಮೇಡು ಸುತ್ತುವ ಹವ್ಯಾಸ. ಸಾಹಿತ್ಯ–ಕಲೆ–ಓದು ನನ್ನ ವ್ಯಕ್ತಿತ್ವ ರೂಪಿಸಿದವು.